ಹೇಳುವಂತೆ ಗಂಟುಬಿದ್ದರು. ಒಬ್ಬ ಹೊಸ ಲೇಖಕನಲ್ಲಿರಬಹುದಾದ ಅದಮ್ಯ ಉತ್ಸಾಹವನ್ನು ಇನ್ನೂ ಉಳಿಸಿಕೊಂಡಿರುವುದಕ್ಕೆ ಖುಷಿಗೊಂಡು ಹೊಗಳಿ, ಆರಂಭದಲ್ಲಿ ತಾವೂ ಹೀಗೆ ತಮ್ಮ ಗುರುಗಳಿಗೆ ಕಾಟ ಕೊಡುತ್ತಿದ್ದುದನ್ನು ನೆನಪಿಸಿಕೊಂಡು ನಕ್ಕರು. 'ತೇಜಸ್ವಿಗಿಂತ ನಾನೇನು ಕಮ್ಮಿ ಸಾರ್... ಅವರಂಗೇ ನಾನೂ ವಾಲೆಂಟರಿ ತಗೊಂಡು ತೋಟ ಮಾಡ್ತಿದೀನಿ. ಅವರಂಗೆ ನಾನೂ ಫೋಟೊ ತಗೀತೀನಿ, ಅವರಂಗೆ ನಾನೂ ಕತೆ, ಕವಿತೆ, ಪ್ರಬಂಧನೆಲ್ಲ ಬರೀತೀನಿ... ನನ್ನ ಗುರಿ ಅವರನ್ನು ಮೀರಿಸೋದು ಸಾರ್... ನೀವೇ ಹೇಳಿ, ನಾನು ಜ್ಞಾನಪೀಠಕ್ಕೆ ಎಲಿಜಿಬಲ್ ಇಲ್ವಾ?...' ಎಂದು ಕೊನೆಸಾಲು ಹೇಳುವ ಮೊದಲೇ, ಸಾಹೇಬರ ಸಾಹಿತ್ಯದ ಹುಚ್ಚಿನ ಪ್ರಮಾಣ ಎಷ್ಟು ಎಂಬುದನ್ನು ಗ್ರಹಿಸಿಬಿಟ್ಟ ಪ್ರೊ. ಕಾಳೇಶ್ ಮಧ್ಯೆ ಬಾಯಿಹಾಕಿ 'ಆದರೆ ಒಂದೇ ದುರಂತ ಅಂದರೆ ನಿಮ್ಮಪ್ಪ ಕುವೆಂಪು ಥರ ಕವಿ ಆಗದೇ ಇರೋದು, ಅಲ್ವಾ ರೀ...' ಎಂದು ಗ್ರೇಟ್ ಜೋಕ್ ಮಾಡಿದವರಂತೆ ಕುಂಡಿಬಡಕೊಂಡು ನಕ್ಕುಬಿಟ್ಟರು..

ಪಾವಂದಯ್ಯ ಏನೋ ಅವಮಾನ ಆದವರಂತೆ ಮುಖ ಸಣ್ಣಗೆ ಮಾಡಿಕೊಂಡಿದ್ದನ್ನು ಗಮನಿಸಿ, 'ಈ ಟೈಟಲ್‌ನಲ್ಲಿ ಈಗಾಗಲೇ ಅನೇಕರು ಬರೆದುಬಿಟ್ಟಿದ್ದಾರಲ್ವೇನ್ರೀ, ನಾವು ಏನೇ ಬರೆದ್ರು ಅದರಲ್ಲಿ ಹೊಸದಾಗಿ ಏನಾದರೂ ಧ್ವನಿಸುವಂತಿರಬೇಕು... ನೀವು ಹಿರಿಯ ಲೇಖಕರು, ನೀವು

